# ಜನಪದ ಕಂಡ ದೇವರು

ಡಿ.ಕೆ. ಈರೇಗೌಡ

*ವೇದಾಂತವು ಜೀವನದ ಪ್ರತಿಯೊಂದು ಆಗುಹೋಗುಗಳನ್ನೂ ಪ್ರವೇಶಿಸಬೇಕು ಎಂಬುವ ಸ್ವಾಮಿ ವಿವೇಕಾನಂದರ ಸಂದೇಶವು ಹಳ್ಳಿಗರ ಜೀವನದಲ್ಲಿ ಹೇಗೆ ಸಾರ್ಥಕ್ಯವನ್ನು ಪಡೆದಿದೆ ಎಂಬುದನ್ನು ಜಾನಪದ ಸಾಹಿತ್ಯ ಪ್ರತಿಬಿಂಬಿಸುತ್ತದೆ. ಇದರ ಪರಿಚಯ ಮಾಡಿಕೊಟ್ಟಿರುವ ಶ್ರೀ ಈರೇಗೌಡ ಅವರು ಮೈಸೂರು ವಿಶ್ವವಿದ್ಯಾನಿಲಯ ಪ್ರಸಾರಾಂಗದ ನಿವೃತ್ತ ಉಪ ನಿರ್ದೇಶಕರು ಹಾಗೂ ಆಶ್ರಮದ ಭಕ್ತರಾಗಿದ್ದಾರೆ.*

ನಮ್ಮ ಜನಪದ ಬದುಕು ಭಗವದ್ ಅಭಿಮುಖವಾದುದು. ಭಗವದ್ ಸ್ಮರಣೆ ಎಂಬುದು ಅವರ ಬದುಕಿನಲ್ಲಿ ಹಾಸು ಹೊಕ್ಕಾಗಿದೆ. ಭಗವಂತ ಅವರ ಜೀವನದ ಎಲ್ಲ ಪದರಗಳಲ್ಲೂ ಪ್ರಜ್ಞಾಪೂರ್ವಕವಾಗಿಯೋ ಅಥವಾ ಅಪ್ರಜ್ಞಾಪೂರ್ವಕವಾಗಿಯೋ ಬೆರೆತುಹೋಗಿದ್ದಾನೆ. ಅವರ ಎಲ್ಲ ಕ್ರಿಯೆಗಳೂ ಭಗವಂತನೊಂದಿಗೆ ಸಮೀಕರಣಗೊಂಡಿವೆ. ಭಗವಂತನನ್ನುಳಿದ ಬದುಕನ್ನು ಅವರು ಕಲ್ಪಿಸಿಕೊಳ್ಳಲಾರರು. "ನಮ್ಮದೆನ್ನುವ ಬದುಕು ಸೊಮ್ಮ ಶಿವನದು ಕಾಣೊ" ಎಂಬ ನಿಲುವು ಅವರದು. ಅವರ ದಿನಚರಿ ಆರಂಭವಾಗುವುದೇ ಭಗವದ್ ಸ್ಮರಣೆಯೊಂದಿಗೆ.

ಮುಂಗೋಳಿ ಕೂಗ್ಯಾವು ಮೂಡು ಕೆಂಪೇರ್‍ಯಾವು
ನಾರಾಯಣಸ್ವಾಮಿ ರಥವೇರಿ – ಬರುವಾಗ
ನಾನೆದ್ದು ಕೈ ಮುಗಿದೇನು.

ದಿನವೆಲ್ಲ ದುಡಿದು ದಣಿದು ಧರೆಗೊರಗಿದ ಈ ಕರ್ಮಯೋಗಿಯನ್ನು ಮರುದಿನದ ಕಾಯಕಕ್ಕಾಗಿ ಎಚ್ಚರಗೊಳಿಸುವುದಾದರೂ ಪ್ರಕೃತಿಯೆ. ಮುಂಗೋಳಿಯ ಈ ಕೂಗು ಮುಂಬೆಳಕಾಗುತ್ತದೆ. ನಿದ್ದೆಯಿಂದೆದ್ದ ಈತ ಮೊದಲು ಕಾಣುವುದಾದರು ಯಾರನ್ನ? ಮೂಡಣದಲ್ಲಿ ಚೆನ್ನೀರ್ ಓಕಳಿ ಚೆಲ್ಲಿ ಮೂಡಿ ಬರುವ ದಿನಕರ, ರಥವೇರಿ ಬರುವ ನಾರಾಯಣನಂತೆ ಕಾಣಿಸುತ್ತಾನೆ. ಅವನಿಗೆ ಅನನ್ಯಭಾವದಿಂದ ಕೈಮುಗಿದು ತನ್ನ ಕಾಯಕಕ್ಕೆ ತೊಡಗುತ್ತಾನೆ. ಉಳುಮೆಗಾಗಿ ಕೊಟ್ಟಿಗೆಯಿಂದ ಎತ್ತುಗಳನ್ನು ತಂದು ನೊಗಕ್ಕೆ ಕಟ್ಟುತ್ತಾನೆ. ಎತ್ತು ಎಂದನೆ —ಅಲ್ಲ. ಅವನು ಎತ್ತುಗಳನ್ನು ಕೇವಲ ಪಶುವೆಂದು ಪರಿಗಣಿಸಲಾರ.

ಎತ್ತು ಎನ್ನಲುಬಹುದೆ ಎಡಚೋರಿ ಬಸವಾನ
ಸುತ್ತೇಳು ಲೋಕ ಸಲವ್ಹೋನ

ಸುತ್ತೇಳು ಲೋಕಕ್ಕೂ ಅನ್ನವನ್ನೀಯುವ ಬಸವನನ್ನು ಎತ್ತು ಎನ್ನಬಹುದೆ? ಸಲ್ಲದು. ಎತ್ತು ಇವನಿಗೆ ದೇವರಿಗೆ ಸಮಾನ. ಆದ್ದರಿಂದ ಎತ್ತಿಗೂ ನಮಿಸುತ್ತಾನೆ, ಪೂಜಿಸುತ್ತಾನೆ. ಪೂಜೆ, ಪ್ರಾರ್ಥನೆಗಳಿಲ್ಲದೆ ಯಾವ ಕೆಲಸವೂ ಸಾಗದು. ಉಳುಮೆಗೆ ಹೂಡುವ ಮೊದಲು ಸಕಲ ಸಾಮಗ್ರಿಗಳಿಗೂ ನಮಿಸುತ್ತಾನೆ. ನೇಗಿಲು, ಹಲುಬೆ, ಕುಂಟೆ ಮೊದಲಾದ ಪರಿಕರಗಳೆಲ್ಲವೂ ಜಡ ವಸ್ತುಗಳಲ್ಲ. ಅವುಗಳಿಗೂ ಪೂಜೆಸಲ್ಲಿಸಿ, ಪ್ರಾರ್ಥನೆ ಗೈಯುತ್ತಾನೆ. ಕೇವಲ ಮರಮುಟ್ಟುಗಳು ಮಾತ್ರವಲ್ಲ ಕಸವೂ ಪವಿತ್ರವಾದುದೆ.

ಕಸವು ಎನ್ನಲುಬಹುದೆ ಕಸ್ತೂರಿನಾತವ
ಎಸಳು ಏಲಕ್ಕಿಗೊನಿ ನಾತ-ಮಹಾಶಿವಗೆ
ಕಸದಿಂದ ರಸದ ಎಡೆಯಾದೊ

ನಾಗರಿಕರು ಕಸವೆಂದು ಕಡೆಗಣಿಸುವುದನ್ನು ಜನಪದ ಮನಸ್ಸು ಕಸ್ತೂರಿಯೆಂದು ಪರಿಭಾವಿಸುತ್ತದೆ. ಆ ಕಸದಿಂದ ಬೆಳೆದ ಪದಾರ್ಥಗಳು ಮಹಾಶಿವನಿಗೆ ನೈವೇದ್ಯವಾಗುತ್ತವೆ. ಇದನ್ನು ಗಮನಿಸಿದಾಗ—

ಕಲ್ಲಿನೊಳು ಕಂಬದೊಳು ಬಳ್ಳದೊಳು ಹಿಕ್ಕೆಯೊಳು
ಎಲ್ಲಿ ಭಾವಿಸಿದೊಡಲ್ಲಿರ್ಪ ಭರಿತನನು
ಬಲ್ಲವೆ ನಿಗಮ ಸರ್ವಜ್ಞ

ಎಂಬ ಸರ್ವಜ್ಞನ ನುಡಿ ನೆನಪಿಗೆ ಬರುತ್ತದೆಯಲ್ಲವೆ? ಅತ್ತ ನೇಗಿಲಯೋಗಿ ಇಹಪರ ಸಾಧನೆಯ ಸಾರ್ಥಕತೆಗಾಗಿ ದುಡಿಮೆಯ ಕುಲುಮೆಯಲ್ಲಿ ತೊಡಗಿದರೆ ಇತ್ತ ಗೃಹಕೃತ್ಯಕ್ಕಾಗಿ ತನ್ನನ್ನೆ ತಾನು ನೋಂಪಿರುವ ಗೃಹಿಣಿ ಬೆಳಗಾಗಿ ಎದ್ದು ನೆನೆಯುವುದಾದರು ಯಾರನ್ನು?

ಬೆಳಗಾಗಿ ನಾನೆದ್ದು ಯಾರ್‍ಯಾರ ನೆನೆಯಾಲಿ
ಎಳ್ಳು ಜೀರಿಗೆ ಬೆಳಿಯೋಳ—ಭೂಮಿತಾಯ
ಎದ್ದೊಂದು ಗಳಿಗೆ ನೆನೆದೇನ.

ಈಕೆ ನೆನೆಯುತ್ತಿರುವುದು ಹಿಮವತ್ಪರ್ವತದಲ್ಲಿ ಧ್ಯಾನದಲ್ಲಿ ಮುಳುಗಿರುವ ಮಹದೇವನನ್ನಲ್ಲ, ವೈಕುಂಠದಲ್ಲಿರುವ ನಾರಾಯಣನನ್ನಲ್ಲ, ಸರ್ವವ್ಯಾಪಿ ಪರಬ್ರಹ್ಮನನ್ನೂ ಅಲ್ಲ. ತಾಯ ಉದರದಿಂದ ನಾವೆಲ್ಲ ಹೊರಬಂದಾಗ ನಮ್ಮನ್ನು ಆದರಿಸಿ ಜತನದಿಂದ ಮೊದಲು ಆತುಕೊಳ್ಳುವ ಭೂಮಾತೆಯನ್ನು. ಭೂಮಿಯೆ ಇಲ್ಲದಿದ್ದರೆ ಬದುಕುವುದುಂಟೆ? ಸಕಲ ಜೀವ ಕಣಗಳಿಗೆ ಸಂಜೀವಿನಿಯಾಗಿರುವ ಭೂಮಾತೆ ಅನ್ನವನ್ನೀಯುವಳು ಮಾತ್ರವಲ್ಲ ಎಳ್ಳು ಜೀರಿಗೆಯನ್ನೂ ನೀಡುತ್ತಾಳೆ. ಎಳ್ಳಿನಿಂದ

ಬರುವ ಎಣ್ಣೆ ಕೇವಲ ನಮ್ಮ ಸುತ್ತ ಮುತ್ತಿರುವ ಕತ್ತಲೆಯನ್ನೋಡಿಸಲು ಬೆಳಕನ್ನು ಮಾತ್ರ ನೀಡುವುದಿಲ್ಲ. ನಮ್ಮ ಮನದಲ್ಲಿ ತುಂಬಿರುವ ಕಾರಿರುಳನ್ನು ಓಡಿಸುವ ಬೆಳಕಾಗುತ್ತದೆ. ಇಂಥ ಭೂಮಾತೆಯನ್ನು ಬೆಳಗಾದೊಡನೆ ಮೊದಲು ನೆನೆಯುವುದು ಎಷ್ಟೊಂದು ಅರ್ಥಗರ್ಭಿತವಾಗಿದೆ!

ಇತ್ತ ಹೊತ್ತು ಮುಳುಗುವವರೆಗೆ ಹೊಲದಲ್ಲೇ ಮುಳುಗಿರುವ ಈ ಜೀವಕ್ಕೆ ಬಿಡುಗಡೆಯಾದರೂ ಎಲ್ಲಿ? ಹಾಗಾದರೆ ಕತ್ತಲಾಯಿತೆಂದು ಗುಡಿಗೆ ಹೋಗುವುದನ್ನು ಮರೆಯಲಾದೀತೆ?

ಹೊತ್ತು ಮುಳಗಿದರೇನು ಕತ್ತಲಾದರೇನು
ಅಪ್ಪ ನಿನಗುಡಿಗೆ ಬರುವೇನು—ಮಲ್ಲಯ್ಯ
ಮುತ್ತಿನ ಕದವ ತೆರೆದಿರೊ
ಬೆಟ್ಟವಾದರೇನು ಎತ್ತರಿದ್ದರೇನು
ಹತ್ತಿ ಬರುವೇನು ನನ್ನೊಡೆಯ—ಮಲ್ಲಯ್ಯ
ಬಿತ್ತರದ ಕದವ ತೆರೆದಿರೊ
ದಟ್ಟಡವಿಯೆಯಿರಲಿ ನಟ್ಟಿರುಳೆಯಿರಲಿ
ಕಷ್ಟವಿನಿತಿಲ್ಲ ನನ್ನಪ್ಪ ನಿನ್ನರಮನೆಯ
ಚಿತ್ತಾರದ ಕದವ ತೆರೆದಿರೊ

ಹಗಲೆಲ್ಲ ದುಡಿದು ದಣಿದ ಈ ಜೀವ ಭಗವದ್ದರ್ಶನಕ್ಕಾಗಿ ನಟ್ಟಿರುಳಿನಲ್ಲಿಯೂ, ದಟ್ಟಡವಿಯಲ್ಲಿಯೂ, ಎತ್ತರದ ಬೆಟ್ಟವನ್ನೂ ಲೆಕ್ಕಿಸದೆ, ಕಷ್ಟವಿನಿತಿಲ್ಲವೆಂದು ಕತ್ತಲೆಯನ್ನೇ ದಾಟಿ ಏರಿ ಬರುವ ಈ 'ಉತ್ಕಟ' ಭಕ್ತನಿಗಾಗಿ, ಮಲ್ಲಯ್ಯ ತನ್ನ ಮುತ್ತಿನ ಕದವನ್ನು ಮಾತ್ರವಲ್ಲ, ತನ್ನ 'ಚಿತ್ತದ' ಕದವನ್ನೂ ತೆರೆದು ಕಾಯ್ದಿರಬೇಕಲ್ಲವೆ! ಏಕೆಂದರೆ ಭಕ್ತವತ್ಸಲನಾದ ಭಗವಂತನಿಗೆ ಸಮಯಾಸಮಯಗಳುಂಟೆ!

ಗೃಮೆಯಿಂದ ಅರಳಿನಿಂತ ಬೆಳೆಯನ್ನು ಪಡೆಯುವ ಮುನ್ನ ಪೂಜೆ ಸಲ್ಲುತ್ತದೆ. ಮೊದಲ ಫಲ ಭಗವಂತನಿಗೇ ಅರ್ಪಿತವಾಗಬೇಕು. ಬಾಳೆ ಗೊನೆ ಬಿಟ್ಟರೆ, ತೆಂಗು ಕಾಯಿ ನೀಡಿದರೆ, ಹೊಲದಲ್ಲಿ ತೆನೆ ಮಾಗಿದರೆ ಎಲ್ಲವೂ ಮೊದಲು ದೇವರಿಗೆ ಮೀಸಲು. ಹಸು ಕರು ಹಾಕಿದಾಗ ಮೊದಲ ಹಾಲನ್ನು ದೇವರಿಗೆ ನೈವೇದ್ಯ ಮಾಡಿದಲ್ಲದೆ ಮುಟ್ಟುವುದಿಲ್ಲ. ಒಟ್ಟಿನಲ್ಲಿ ಭಗವಂತ ಇವರ ಬದುಕಿನಲ್ಲಿ ಬೆರೆತುಹೋಗಿದ್ದಾನೆ.

ನಮ್ಮ ಜನಪದ ಮರ್ತ್ಯವನ್ನೂ ಅಮರ್ತ್ಯವನ್ನಾಗಿಸ ಬಯಸುತ್ತದೆ. ಈ ಜನರು ಇಹವನ್ನೂ ತೊರೆದವರಲ್ಲ, ಪರವನ್ನೂ ಮರೆತವರಲ್ಲ. ಇಹಪರವೆರಡನ್ನೂ ಸಮನ್ವಯಗೊಳಿಸುವುದು ಅವರ ಪರಿ. ಬದುಕು ಶಿವಮುಖವಾದುದು ಎಂಬುದನ್ನು ಅವರು ಬಲ್ಲರು.

**ಸತಿ ಕೊಡೊ ಸಹದೇವ ಮತಿ ಕೊಡೊ ಮಹಾದೇವ**
**ವಿದ್ಯೆಯ ಕಲಿಸಯ್ಯ ಹಿರಿಯರ ಕೂಡ**

'ಸತಿ'ಯನ್ನು ಕೋರುವ ಮನ ಜೊತೆಯಲ್ಲಿ ಮತಿಯನ್ನೂ ಬೇಡುತ್ತದೆ. ಮತಿಯಿಲ್ಲದಿದ್ದರೆ ಮನಸ್ಸು ಇಹದ ಮಾಯಾ ಬಲೆಯಲ್ಲಿ ಬಂಧಿತವಾಗುತ್ತದೆ. ಸಂಸಾರ ಸಾಗರದಲ್ಲಿ "ಸತಿ" ಮುಳುಗುವ ಗುಂಡಾಗಬಾರದು, ತೇಲುವ ಬೆಂಡಾಗಬೇಕು ಎಂಬುದು ಅವರ ಹಂಬಲ. "ಸತಿ" ಸದ್ಗತಿಗೆ ಸಾಧನವಾಗಬೇಕು ಎಂಬುದು ಅವರ ಜೀವನ ನೀತಿ. "ಸತಿಪತಿಗಳೊಂದಾದ ಬಕುತಿ ಹಿತವಾಗಿಪ್ಪುದು ಹರಂಗೆ" ಎಂಬ ಅರಿವು ಅವರಲ್ಲಿದೆ. ಮೋಹ ಬಂಧಿತವಾಗದೆ ಯೋಗ ಬಂಧಿತವಾಗುವ 'ಮತಿ'ಗಾಗಿ ಪ್ರಾರ್ಥಿಸುತ್ತಾರೆ. ಜೊತೆಗೆ ವಿದ್ಯೆಯೂ ಬೇಕೆಂದೂ ಕೇಳುತ್ತಾರೆ. ಆದರೆ ಆ ವಿದ್ಯೆ ಹಿರಿಯರಿಂದ ಬರಬೇಕು. ಹಾಗಿಲ್ಲದೆ ಅಲ್ಪಮತಿಗಳಿಂದಾದರೆ ಅದು ಅವಿದ್ಯೆಯೊ ಕುವಿದ್ಯೆಯೊ ಆಗಬಹುದು. ಆದುದರಿಂದ ವಿದ್ಯೆ ನೀಡುವವರು ಹಿರಿಯರಾಗಿರಬೇಕು, ಆತ್ಮಜ್ಞಾನವನ್ನೂ ಅರಿತವರಾಗಬೇಕು. ಅಂಥ ಗುರು ಶಿಷ್ಯನನ್ನು ತಿದ್ದಿ ತೀಡಿ ನೇರ್ಪುಗೊಳಿಸುತ್ತಾನೆ. ಶಿಷ್ಯನಲ್ಲಿರುವ ಕಲ್ಮಷವನ್ನೆಲ್ಲ ಹೀರಿ ಶುದ್ಧಗೊಳಿಸುತ್ತಾನೆ. ಈ ಅವಿದ್ಯಾ ಸಂಸಾರವನ್ನು ವಿದ್ಯಾ ಸಂಸಾರವನ್ನಾಗಿ ಮಾಡುತ್ತಾನೆ. ಅರಿವುಳ್ಳ ಹಿರಿಯ ಗುರುವಿಗಾಗಿ ಮೊರೆಯಿಡುತ್ತದೆ ಮುಗ್ಧಮನಸು.

ಜನಪದ ದೇವರನ್ನು ತಮ್ಮ ಒಡನಾಡಿ, ಗೆಳೆಯ, ಗೆಳತಿ, ಬಂಧು, ತಮ್ಮ ಬದುಕಿನಲ್ಲಿ ಒಂದಾಗಿ ಬೆರೆತವನು ಎಂದು ಪರಿಭಾವಿಸುತ್ತದೆ.

**ಹಸೆಹಾಕು ಪಾರ್ವತಿದೇವಿ, ಋಷಿಗಳು ಬಂದವರೆ**

ಋಷಿಗಳು ಮನೆಗೆ ಬಂದಿದ್ದಾರೆ. ಅವರಿಗೆ ಕೂರಲು ಆಸನವನ್ನು ಕೊಡು ಎಂದು ಹೇಳುತ್ತಿದ್ದಾಳೆ ಒಬ್ಬ ಗೃಹಿಣಿ. ಯಾರಿಗೆ? ಸಾಕ್ಷಾತ್ ಜಗಜ್ಜನನಿಗೆ! ಪಾರ್ವತಿ ಬೇರೆ ಯಾರೂ ಅಲ್ಲ, ನಮ್ಮವಳು, ನಮ್ಮ ಒಡನಾಡಿ ಗೆಳತಿ—ಎಂಬುದು ಅವರ ಭಾವ. ಗೆಳತಿಗೆ ಹೇಳುವಂತೆ ಋಷಿಗಳಿಗೆ ಆಸನ ನೀಡೆಂದು 'ಸಲುಗೆ'ಯಿಂದ ಹೇಳುತ್ತಾಳೆ. ಆದರೆ ಆ 'ಸಲುಗೆ' ಲಘುವಾದುದಲ್ಲ, ಆದರಪೂರ್ವಕವಾದುದು, ಗೌರವಪೂರ್ವಕವಾದುದು. ನಮ್ಮ ಜನ ಋಷಿಗಳನ್ನು ದೇವತೆಗಳಿಗಿಂತ ಹೆಚ್ಚು ಗೌರವದಿಂದ ಕಾಣುತ್ತಿದ್ದರು. ಆದುದರಿಂದ ಅವರನ್ನು ಸತ್ಕರಿಸಲು ಸಾಮಾನ್ಯರು ಸಲ್ಲದು. ಸಾಕ್ಷಾತ್ ಪಾರ್ವತಿಯೇ ಬರಬೇಕು. ಈ ಮುಗ್ಧ ಮನಸ್ಸಿನ ಪರಿಶುದ್ಧ ಕರೆಗೆ ಜಗಜ್ಜನನಿ ಓಗೊಟ್ಟಿರಬೇಕಲ್ಲವೆ!

ಅತೃಪ್ತ ಮನಸ್ಸಿನ ಕಾಮನೆಗಳು ಕನಸುಗಳಾಗಿ ಪರಿವರ್ತನೆಗೊಳ್ಳುತ್ತವೆ ಎಂದು ಆಧುನಿಕ ಮನಶ್ಶಾಸ್ತ್ರಜ್ಞರು ಪ್ರತಿಪಾದಿಸುತ್ತಾರೆ. ನಮ್ಮ ಸಾಧ್ವಿಯೊಬ್ಬಳು ಕನಸೊಂದನ್ನು ಕಾಣುತ್ತಾಳೆ. ಅದೆಂಥ ಕನಸು! ಅದೆಂಥ ಕಣಸು!!

**ನಿದ್ದೆಗಣ್ಣಿನಲ್ಲಿ ಶುದ್ಧ ಗುರುವಿನ ಪಾದ**
**ಎದ್ದು ನೋಡಿದರೆ ನಿರಬಯಲು—ಲೋಕಾದಿ**
**ರುದ್ರರನ ಮಹಿಮೆ ತಿಳಿಯಾವು**

ಜೀವನದ ಪರಮ ಉದ್ದೇಶ ಪರಮಾತ್ಮನನ್ನು ಪಡೆಯುವುದು ಎಂಬ ಅರಿವು ಈ ಚೇತನಕ್ಕಿದೆ. ಅವನ ಸಾಮೀಪ್ಯಕ್ಕಾಗಿ, ಸಾನ್ನಿಧ್ಯಕ್ಕಾಗಿ ಹಗಲು ಇರುಳೆನ್ನದೆ ತವಕಿಸುತ್ತದೆ. ತುಡಿಯುತ್ತದೆ ಈ ಜೀವ ಹಗಲಿನ ಹಂಬಲಿಕೆ ಇರುಳಿನ ಕನಸಿನಲ್ಲಿ ಕಣಸಾಗುತ್ತದೆ. ಮಾಯಾ ನಿದ್ರಾಜಾಲದಲ್ಲಿ ಸಿಲುಕಿಹೋಗಿದ್ದ ಜೀವ 'ಶುದ್ಧ ಗುರುವಿನ' ನೆರವಿನಿಂದ ಎಚ್ಚೆತ್ತು ಎದ್ದು ನೋಡಿದರೆ ನಿರಬಯಲು-ನಿರ್ಬಯಲು-ಬಯಲೊಳಗೆ ಬಯಲು. ಎಂಥ ಉನ್ನತ ಸ್ಥಿತಿ; ಇದಕ್ಕಿಂತ ಮಿಗಿಲುಂಟೇ? ಸಾರ್ಥಕ್ಯವುಂಟೆ? ಹುಡಿಯೊಳಗೆ ಹುಡಿಯಾಗಿ ಬೆರೆತು ಬೆಳೆದ ಜೀವ ಎಂಥ ಔನ್ನತ್ಯಕ್ಕೇರಿದೆ. ಬಹುಶಃ ಬಯಲೊಳಗೆ ಬಯಲಾಗಿಯೇ ಹೋಗಿರಬಹುದೇ ಈ ಚೇತನ!

ನಮ್ಮ ಜನಪದ ಮನಸ್ಸು ಪ್ರಕೃತಿಯ ಪ್ರಕ್ರಿಯೆಗಳನ್ನೇ ಪರಮಾತ್ಮನ ಪೂಜಾಪರಿಕರಗಳಾಗಿ ಪರಿಭಾವಿಸುತ್ತದೆ :

ಆಕಾಶವದವ್ವಾಗ ಧೂಪಾದ ಹೊಗೆಯೆದ್ದೊ
ಆಯ್ತು ಮಲ್ಲಯ್ಗೆ ಶಿವಪೂಜೆ
ಆಕಾಶವ ಗಂಟೆ ಘೀರೆಂದೊ

ಎಂಥ ವಿರಾಟ ಸ್ವರೂಪದ ಚಿಂತನೆಯಿದು! ಎಂಥ ಭೂಮ ಕಲ್ಪನೆ! ಸೂರ್ಯನ ಶಾಖಕ್ಕೆ ಕಾದ ಸಮುದ್ರದ ನೀರು ಆವಿಯಾಗಿ ಮೋಡದ ಸ್ವರೂಪ ಪಡೆದು ಮಳೆಯಾಗಿ ಸುರಿಯುತ್ತದೆ ಎಂಬುದು ವೈಜ್ಞಾನಿಕ ಸತ್ಯ. ಬಹುಶಃ ಅವೈಜ್ಞಾನಿಕವೆಂದು ಪರಿಗಣಿಸಲಾಗಿರುವ ಜನಪದ ಮನಸ್ಸು ವೈಜ್ಞಾನಿಕ ಇತಿಮಿತಿಗಳನ್ನೂ ಮೀರಿ ಸೃಷ್ಟಿಯ ನಿಗೂಢ ರಹಸ್ಯವನ್ನು ಬಯಲುಗೊಳಿಸುವ ಬಗೆ ಅನುಪಮವಾದುದು. ಆಕಾಶದಲ್ಲಿ ವಿಹರಿಸುವ ಮೋಡಗಳು ಪರಮಾತ್ಮನಿಗೆ ಅರ್ಪಿಸಿದ ಧೂಪವಾಗಿಯೂ, ಗುಡುಗು ಮಿಂಚುಗಳು ಜಗದೊಡೆಯನಿಗೆತ್ತಿದ ಆರತಿ, ಘಂಟೆ ನಿನಾದಗಳಾಗಿಯೂ ಬಗೆವ ಈ ಬಗೆಗಣ್ಣಿನ ದರ್ಶನ ಕಲ್ಪನಾತೀತವಾದುದು. ಈ ಜನರ ಹೃದಯದಲ್ಲಿ ನಡೆಯುವ ಕ್ರಿಯೆ ಪ್ರಕ್ರಿಯೆಗಳೂ ಚರಾಚರವಸ್ತುಗಳ ಸ್ಥಿತಿಗತಿಗಳೂ ಭಗವದಭಿಮುಖವಾದವು ಮತ್ತು ಭಗವಂತನಿಗಾಗಿಯೇ ಹಂಬಲಿಸುವಂಥವು. ಅವನನ್ನು ಸೇರುವುದೇ ಪರಮ ಚರಮ ಗುರಿಯೆಂಬುದನ್ನು 'ಧ್ವನಿ'ಸುತ್ತವೆ.

ಜನಪದ ಮನಸ್ಸು ಸಮನ್ವಯ ದೃಷ್ಟಿಯುಳ್ಳದ್ದು. ಭಗವಂತನ ಬಗೆಗೆ ಅವರಲ್ಲಿ ತರತಮ ಭಾವವಿಲ್ಲ. ಆ ದೇವರು ಈ ದೇವರು ಎಂಬ ಭೇದವಿಲ್ಲ. "ದೇವನೊಬ್ಬ, ನಾಮ ಹಲವು" ಎಂಬುದು ಅವರ ನೀತಿ. ಹರನಿಗೂ ಹರಕೆ ಹೊರುತ್ತಾರೆ, ಹರಿಯನ್ನು ಹರಸೆಂದು ಬೇಡುತ್ತಾರೆ. ಕಾಳಿಗೂ ಮಣಿಯುತ್ತಾರೆ, ಮಾರಿಗೂ ಮುಡಿಯಿಡುತ್ತಾರೆ. ಕಾಡಕಲ್ಲಿಗೂ ಕೈಮುಗಿಯುತ್ತಾರೆ. ನಾಡಭೈರವನಿಗೂ ಇಡಿಗಾಯಿಡುತ್ತಾರೆ. ಅಷ್ಟೇತಕೆ ಬಾಬಯ್ಯನಿಗೂ ನಡೆದುಕೊಳ್ಳುತ್ತಾರೆ, ಏಸುಸ್ವಾಮಿಗೂ ನಮಿಸುತ್ತಾರೆ. ಮರಮುಟ್ಟುಗಳಿಗೂ ಮಣಿಯುವ ಮನ ಅವರದು. ಚರಾಚರ ವಸ್ತುಗಳಲ್ಲಿಯೂ ಭಗವಂತನನ್ನೇ ಕಾಣುವ ದೃಷ್ಟಿ ಅವರದು. ಭಗವಾನ್ ಶ್ರೀರಾಮಕೃಷ್ಣರು—"ನೀರನ್ನು ಕೆಲವರು ಪಾನಿ ಎಂದು ಕರೆದರೂ ಮತ್ತೆ ಕೆಲವರು ವಾಟರ್ ಎಂದು ಕರೆದರೂ ಮತ್ತೆ ಕೆಲವರು ಜಲ ಎಂದು ಕರೆದರೂ ವಸ್ತು ಒಂದೇ ಆಗಿರುವಂತೆ, ಭಗವಂತನನ್ನು ಬೇರೆ ಬೇರೆ ಹೆಸರುಗಳಿಂದ ಕರೆದರೂ ಇರುವ ದೇವರೊಬ್ಬನೇ" ಎಂದು ಹೇಳಿರುವಂತೆ ಜಲವೆಲ್ಲವೂ ತೀರ್ಥ ಎಂಬ ಮನಃಸ್ಥಿತಿ ಇವರದು. ಈ ಸಮನ್ವಯಭಾವ ಅವರ ಬದುಕಿನೊಂದಿಗೆ ಬೆರೆತುಹೋಗಿದೆ. ಜಗತ್ತು ಧರ್ಮಾಂಧತೆಯ ದಳ್ಳುರಿಯಿಂದ ಹೊತ್ತಿ ಉರಿಯುತ್ತಿರುವ ಈ ಹೊತ್ತಿನಲ್ಲಿ ಜನಪದ ಸಮನ್ವಯದೃಷ್ಟಿಯನ್ನು ಬದುಕಿನಲ್ಲಿ ಅಳವಡಿಸಿಕೊಳ್ಳುವ ಅಗತ್ಯತೆಯನ್ನು ಮಾನವತೆ ಮನಗಾಣಬೇಕಾಗಿದೆ.

ನಮ್ಮ ಜನಪದ ವೇದ, ಗೀತೆ, ಉಪನಿಷತ್ತು ಮೊದಲಾದವುಗಳನ್ನು ಓದಿ ತಿಳಿದವರಲ್ಲ (ಕೇಳಿ ತಿಳಿದಿದ್ದಾದರೂ ತಿಳಿದಿರಬಹುದು), ಓದುಬರಹ ಬಲ್ಲವರಲ್ಲ, ನಿರಕ್ಷರಕುಕ್ಷಿಗಳು. ಅದನ್ನು ಅವರೇ ನಮ್ರತೆಯಿಂದ ಹೇಳಿಕೊಂಡಿದ್ದಾರೆ :

ವೇದವನೋದಿಲ್ಲ ಗೀತೆಯನೋದಿಲ್ಲ
ಓದುಬರಹ ನಮಗೆ ತಿಳಿದಿಲ್ಲ—ಕೇಳಿರವ್ವ
ಲೆಕ್ಕಣಿಕೆ ನಮಗೆ ಗೊತ್ತಿಲ್ಲ.

ಹಲಗೇಯ ಹಿಡಿದಿಲ್ಲ ಬಳಪಾದಿ ಬರೆದಿಲ್ಲ
ಶ್ರೀಗುರು ನಮಗೆ ಕಲಿಸಿಲ್ಲ—ಕೇಳಿರವ್ವ
ಲೆಕ್ಕಣಿಕೆ ನಮಗೆ ಗೊತ್ತಿಲ್ಲ.

"ಹಲಗೆ ಬಳಪವ ಹಿಡಿಯದೊಂದಗ್ಗಳಿಕೆ" ಇವರದು. ಇವರಿಗೆ ಜೀವನವೇ ಪಾಠಶಾಲೆ, ಬದುಕೇ ಶ್ರೀ ಗುರು. ಜೀವನದ ಅನುಭವಗಳ ಮೂಲಕ ಅನುಭಾವಿಗಳಾದವರು. ಎಲ್ಲವೂ ಭಗವದರ್ಪಿತವೆಂದು ಬದುಕಿದವರು. "ಕರುಣೆ ಬಂದರೆ ಕಾಯೊ ಮರಣ ಬಂದರೆ ಒಯ್ಯೊ" ಎಂಬ ಸಂಪೂರ್ಣ ಶರಣಾಗತಿಯಿಂದ ಭಗವಂತನೊಂದಿಗೆ ಸಾಯುಜ್ಯ ಪಡೆದವರು.

**ಆಶ್ರಮದ ಕಾರ್ಯಕ್ರಮಗಳು**

***ನವೆಂಬರ್ 2003***

| | | |
|---|---|---|
| ಏಕಾದಶಿ | ಮಂಗಳವಾರ | 4 |
| ಸ್ವಾಮಿ ಸುಬೋಧಾನಂದ ಜಯಂತಿ | ಬುಧವಾರ | 5 |
| ಸ್ವಾಮಿ ವಿಜ್ಞಾನಾನಂದ ಜಯಂತಿ | ಶುಕ್ರವಾರ | 7 |
| ಏಕಾದಶಿ | ಗುರುವಾರ | 20 |